ಕರ್ನಾಟಕ ಸರ್ಕಾರ
(ರಾಮನಗರ ಜಿಲ್ಲಾ ಪಂಚಾಯತ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ, ರಾಮನಗರ ಜಿಲ್ಲೆ.

Phone No: 08027274551, E-mail ID: egovramanagara@gmail.com

ಸಂಖ್ಯೆ: ಸಶಿಕ/ಇಕೋ-ಕ್ಲಬ್.ಡಿ.ಐ.ಎಂ.ಸಿ.ಸ/01/2019-20 ದಿನಾಂಕ:16-12-2019

# "ಸಭಾ ನಡಾವಳಿ"

2019-20ನೇ ಸಾಲಿನ ಇಕೋ-ಕ್ಲಬ್ ಚಟುವಟಿಕೆಯ ಸಂಬಂಧ, ಜಿಲ್ಲಾಧಿಕಾರಿಗಳ ಕಛೇರಿ, ಸಭಾಂಗಣದಲ್ಲಿ ದಿನಾಂಕ 16-12-2019 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ "ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ" ಸಭೆಯ ನಡಾವಳಿ.

**ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಗೆ ಹಾಜರಾದವರು.**

1. ಶ್ರೀಮತಿ, ಅರ್ಚನಾ.ಎಂ.ಎಸ್, ಮಾನ್ಯ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ. ಹಾಗೂ ಅಧ್ಯಕ್ಷರು ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿ, ರಾಮನಗರ ಜಿಲ್ಲೆ, ರಾಮನಗರ.
2. ಶ್ರೀ.ಬಿ.ಪಿ, ವಿಜಯ್, ಮಾನ್ಯ ಅಪರ ಜಿಲ್ಲಾಧಿಕಾರಿಗಳು. ರಾಮನಗರ ಜಿಲ್ಲೆ, ರಾಮನಗರ.
3. ಆರ್, ಗೋಪಿನಾಥ್, ಉಪ ಅರಣ್ಯ ಸಂರಕ್ಷಣಾಧಿಕಾರಿ, (ಸಾಮಾಜಿಕ ಅರಣ್ಯ) ರಾಮನಗರ ಜಿಲ್ಲೆ, ರಾಮನಗರ.
4. ಶ್ರೀ ಸೋಮಶೇಖರಯ್ಯ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ.
5. ಶ್ರೀ.ವಿ.ಎಸ್.ಕುಮಾರ್, ಉಪ ಪರಿಸರ ಅಧಿಕಾರಿ (ಕೆ.ಎಸ್.ಪಿ.ಸಿ.ಬಿ) ರಾಮನಗರ ಜಿಲ್ಲೆ, ರಾಮನಗರ.
6. ಶ್ರೀ ನರಸಿಂಹಮೂರ್ತಿ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ.
7. ಶ್ರೀ ನಿರಂಜನ್, ಜಿಲ್ಲಾ ವೈದ್ಯಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ.
8. ಶ್ರೀ ಸಿ.ವಿ.ರಾಮನ್, ಉಪನಿದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ. ರವರ ಪರವಾಗಿ.
9. ಶ್ರೀಮತಿ ಫಿಲೋಮಿನ, ನಿರ್ದೇಶಕರು, ಸೇಕ್ರೆಡ್ ಸೇವಾ ಸಂಸ್ಥೆ, ಬಿಡದಿ, ರಾಮನಗರ ಜಿಲ್ಲೆ,
10. ಶ್ರೀ.ಶ್ರೀಕಂಠಪ್ರಸಾದ್ ಬಿ.ಎಸ್. ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ರಾಮನಗರ, ರಾಮನಗರ ಜಿಲ್ಲೆ.
11. ಶ್ರೀಮತಿ, ಆಶಾ, ಎ.ಪಿ.ಸಿ, ಸಮಗ್ರ ಶಿಕ್ಷಣ ಕರ್ನಾಟಕ, ರಾಮನಗರ, ರಾಮನಗರ ಜಿಲ್ಲೆ.
12. ಶ್ರೀ. ಸುರೇಶ್, ಎ.ಪಿ.ಸಿ, ಸಮಗ್ರ ಶಿಕ್ಷಣ ಕರ್ನಾಟಕ, ರಾಮನಗರ, ರಾಮನಗರ ಜಿಲ್ಲೆ.
13. ಶ್ರೀ. ಶ್ರೀರಾಮ.ಸಿ, ಮುಖ್ಯ ಶಿಕ್ಷಕರು, ಸರ್ಕಾರಿ ಪೌಢಶಾಲೆ. ಐಜೂರು, ರಾಮನಗರ ತಾಲ್ಲೂಕು.
14. ಶ್ರೀಮತಿ. ಪ್ರೇಮಕುಮಾರಿ.ಸಿ, ಮುಖ್ಯ ಶಿಕ್ಷಕರು, ಸರ್ಕಾರಿ ಪೌಢಶಾಲೆ. ಹನುಮಂತನಗರ, ರಾಮನಗರ ತಾಲ್ಲೂಕು.
15. ಶ್ರೀಮತಿ. ಶಶಿಕಲಾ. ಬಿ.ಸಿ., ಮುಖ್ಯ ಶಿಕ್ಷಕರು, ಆದರ್ಶ ವಿದ್ಯಾಲಯ, ಮತ್ತೀಕೆರೆ ಶೆಟ್ಟಿಹಳ್ಳಿ, ಚನ್ನಪಟ್ಟಣ ತಾಲ್ಲೂಕು.

Scanned by CamScanner

16. ಶ್ರೀಮತಿ. ಗಂಗಮ್ಮ, ಮುಖ್ಯ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ಸೋಲೂರು, ಮಾಗಡಿ ತಾಲ್ಲೂಕು.
17. ಶ್ರೀಮತಿ. ಗೀತಾ, ಮುಖ್ಯ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ಚಿಕ್ಕಮುದುವಾಡಿ, ಕನಕಪುರ ತಾಲ್ಲೂಕು.

ಮಾನ್ಯ ಉಪನಿರ್ದೇಶಕರು, ಅಧ್ಯಕ್ಷರು ಹಾಗೂ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು ಮತ್ತು ಇಕೋ-ಕ್ಲಬ್ ಚಟುವಟಿಕೆ ಸಂಬಂಧ, ಪ್ರಾಸ್ತಾವಿಕ ವಿಚಾರಗಳನ್ನು ಸಮಿತಿಯ ಮುಂದೆ ಮಂಡಿಸಿ, ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲಾಯಿತು.

**1) ಇಕೋ-ಕ್ಲಬ್ ಶಾಲೆಯ ನಿರ್ವಹಣೆ:-**

"ಇಕೋ-ಕ್ಲಬ್" ಚಟುವಟಿಕೆಯು ಭಾರತ ಸರ್ಕಾರದ ಪರಿಸರ ಅರಣ್ಯಗಳ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಒಂದು ರಾಷ್ಟ್ರೀಯ ಕಾರ್ಯಕ್ರಮವಾಗಿದೆ. "ಇಕೋ-ಕ್ಲಬ್" ಎಂದೇ ಶಾಲೆಗಳಲ್ಲಿ ಜನಪ್ರಿಯವಾಗಿರುವ 'ರಾಷ್ಟ್ರೀಯ ಹಸಿರು ಪಡೆ' ಎಂಬ ಶೀರ್ಷಿಕೆಯಡಿ ಶಾಲೆಗಳಲ್ಲಿ ಪರಿಸರ ಸಂಬಂಧ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಕಾರ್ಯಕ್ರಮವು ಶಾಲಾ ಮಕ್ಕಳಲ್ಲಿ ಪರಿಸರ ಮಾಲಿನ್ಯ, ಪರಿಸರದ ಸಮಸ್ಯೆಗಳು ಮತ್ತು ಅದರ ಸಂರಕ್ಷಣೆಯ ಬಗ್ಗೆ ಸಂವೇದನೆ ಉಂಟುಮಾಡುವುದು. ಪ್ರತಿ ಶಾಲೆಯಲ್ಲಿ ಇಕೋ-ಕ್ಲಬ್ ಗಳನ್ನು ಸ್ಥಾಪಿಸಿ ಪರಿಸರ ಸಂಬಂಧ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಲಾಯಿತು.

**2) ಇಕೋ-ಕ್ಲಬ್ ಚಟುವಟಿಕೆ ಅನುಷ್ಠಾನಗೊಳಿಸಲು ಶಾಲೆಗಳ ಆಯ್ಕೆ.**

ಜಿಲ್ಲೆಯಲ್ಲಿ 250 ಶಾಲೆಗಳಲ್ಲಿ ಈಗಾಗಲೇ ಇಕೋ-ಕ್ಲಬ್ ರಚನೆಗೊಂಡಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು-85, ಸರ್ಕಾರಿ ಪ್ರೌಢಶಾಲೆಗಳು-106 ಮತ್ತು ಅನುದಾನಿತ ಪ್ರೌಢಶಾಲೆಗಳು-58 ಶಾಲೆಗಳು ಈ ಚಟುವಟಿಕೆಗೆ ಒಳಪಡುತ್ತವೆ. ಪ್ರತಿ ವರ್ಷ ಪರಿಸರ ಸಂಬಂಧ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದ್ದು, ಸದರಿ ಶಾಲೆಗಳಲ್ಲಿ ಇಕೋ-ಕ್ಲಬ್ ಚಟುವಟಿಕೆಗಳು ನಡೆಯುತ್ತಿರುವುದಾಗಿ ತಿಳಿಸಲಾಯಿತು. ಪ್ರತಿ ಶಾಲೆಗೆ 5000/- ರೂ.ಗಳ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದು, 2019-20 ನೇ ಸಾಲಿನಲ್ಲಿ 250 ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

ಜಿಲ್ಲಾಧಿಕಾರಿಗಳು ರವರು ಮಾತನಾಡಿ ಎಲ್ಲಾ ಶಾಲೆಯ ಮುಖ್ಯ ಶಿಕ್ಷಕರು ನೇರವಾಗಿ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡುವುದು ಅಥವಾ ದೂರವಾಣಿ ಮುಖಾಂತರ ಮಾತನಾಡುವುದರ ಬದಲು ಬ್ಲಾಕ್ ಹಂತದಲ್ಲಿ ಕಡಿಮೆ ಕೆಲಸದ ಒತ್ತಡವಿರುವ ನಾಲ್ಕು ತಾಲ್ಲೂಕುಗಳ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ಜವಾಬ್ದಾರಿಯನ್ನು ವಹಿಸಿ, ಅವರು ಇಂತಹ ಶಾಲೆಗಳಿಗೆ ಇಂತಿಷ್ಟು ಸಸಿಗಳನ್ನು ಕೊಡಲು ನೇರವಾಗಿ ಸಾಮಾಜಿಕ ಅರಣ್ಯ ಅಧಿಕಾರಿಗಳನ್ನು ಭೇಟಿ ಮಾಡಿ ಕಾರ್ಯರೂಪಕ್ಕೆ ತರಲು ಸಹಾಯವಾಗುತ್ತದೆ. ಇದರಿಂದ ಅರಣ್ಯ ಅಧಿಕಾರಿಗಳಿಗೆ ಸಮಯದ ಉಳಿತಾಯವಾಗುವುದರ ಜೊತೆಗೆ ಕಿರಿಕಿರಿಯಾಗುವುದು ತಪ್ಪುತ್ತದೆ ಎಂದು ಸಲಹೆ ನೀಡಿದರು ಸಭೆಯು ಅದನ್ನು ಒಪ್ಪಿತು.

ಶಾಲೆಯ ಆಟದ ಮೈದಾನದ ಲಭ್ಯತೆಯ ಆದಾರದ ಮೇಲೆ ಅಗತ್ಯವಿರುವ ಹೂವಿನ ಗಿಡಗಳು, ಹಣ್ಣಿನ ಗಿಡಗಳನ್ನು ಪಟ್ಟಿ ಮಾಡಿಕೊಂಡು ಸರಬರಾಜು ಮಾಡುವುದಾಗಿ ಶ್ರೀ ಗೋಪಿನಾಥ್ ಸಾಮಾಜಿಕ ಅರಣ್ಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಇಕೋ-ಕ್ಲಬ್ ಅಡಿಯಲ್ಲಿ ಆಯ್ಕೆಯಾಗಿರುವ ಶಾಲೆಗಳಿಗೆ ಇಲಾಖೆಯ ಆರ್.ಪಿ.ಗಳು ಸಾಮಾಜಿಕ ಅರಣ್ಯಕ್ಕೆ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ಪಡೆಯುವಂತೆ ತೀರ್ಮಾನಿಸಲಾಯಿತು.

Scanned by CamScanner

3) ಶಾಲಾ ಹಂತದಲ್ಲಿ ಇಕೋ-ಕ್ಲಬ್ ಚಟುವಟಿಕೆ ಅನುಷ್ಠಾನ ಮತ್ತು ಮೇಲ್ವಿಚಾರಣೆ.

ಶಾಲಾ ಹಂತದಲ್ಲಿ ಮುಖ್ಯಶಿಕ್ಷಕರು ಇಕೋ-ಕ್ಲಬ್ ಚಟುವಟಿಕೆಯ ಮೇಲ್ವಿಚಾರಣೆ ವಹಿಸಿರುತ್ತಾರೆ. ಪರಿಸರದ ಬಗ್ಗೆ ಕಾಳಜಿ ಇರುವ ಒಬ್ಬರು ಶಿಕ್ಷಕರು ಉಸ್ತುವಾರಿ ಶಿಕ್ಷಕರಾಗಿರುತ್ತಾರೆ. ಪ್ರತಿ ಶಾಲೆಯಿಂದ 30 ರಿಂದ 50 ವಿದ್ಯಾರ್ಥಿಗಳು ಸದಸ್ಯರಾಗಿರುತ್ತಾರೆ. ಪರಿಸರ ಜಾಗೃತಿಗಾಗಿ, ಪರಿಸರ ಕುರಿತ ವಿವಿಧ ಚಟುವಟಿಕೆಗಳನ್ನು ಕಾರ್ಯಕ್ರಮಗಳ ಮೂಲಕ ಪ್ರೌಢ ಶಾಲಾ ವಿದ್ಯಾರ್ಥಿಗಳಿಂದ ಹಮ್ಮಿಕೊಳ್ಳಲಾಗುತ್ತದೆ.

4) ಇಕೋ-ಕ್ಲಬ್‌ನ ಅಡಿಯಲ್ಲಿ ನಡೆಯುವ; ಪರಿಸರ ಮಾಲಿನ್ಯ ಮತ್ತು ನಿಯಂತ್ರಣ ಸಂಬಂಧ, ಪ್ರಮುಖ ಅಂಶಗಳು:-

ಎಂಪ್ರಿ ಸಂಸ್ಥೆಯ ಪ್ರತಿನಿಧಿಯಾದ ಶ್ರೀಮತಿ ಕೋಮಲ ರವರು ಮಾತನಾಡಿ 'ಇಕೋ-ಕ್ಲಬ್' ಎಂದರೆ ಬರೀ ಸಸಿಗಳನ್ನು ನೆಡುವುದು ಮಾತ್ರವಲ್ಲದೇ ನೀರಿನ ಸಂರಕ್ಷಣೆಯ ಹೊಣೆಯೂ ಸಹ ಇದೆ ಎಂದು ತಿಳಿಸಿದರು. ಡಿ.ಪಿ.ಎಂ.ಸಿ ಸಭೆಯ ಸದಸ್ಯರುಗಳು (ಮುಖ್ಯ ಶಿಕ್ಷಕರು) 5000/-ರೂ.ಗಳಲ್ಲಿ ನೀರಿನ ಮರುಬಳಕೆ, ಮಳೆ ನೀರಿನ ಕೊಯ್ಲು ಮಾಡಲಿಕ್ಕೆ ಈ ಹಣ ಸಾಕಾಗುವುದಿಲ್ಲ ಎಂದು ತಿಳಿಸಿದರು. ಆದ್ದರಿಂದ ಜಿಲ್ಲಾಧಿಕಾರಿಗಳು ರವರು ಮಾತನಾಡಿ ಎಂಪ್ರಿ ಸಂಸ್ಥೆಯವರೇ ತಾಲ್ಲೂಕಿಗೆ ಒಂದರಂತೆ ಒಂದು ಶಾಲೆಯನ್ನು ಆಯ್ಕೆ ಮಾಡಿಕೊಂಡು ನೀರಿನ ಸಂರಕ್ಷಣಾ ಘಟಕಗಳನ್ನು ಸ್ಥಾಪಿಸಬೇಕೆಂದು ಸೂಚನೆ ನೀಡಿದರು. ನೀರಿನ ಮರುಬಳಕೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಅರಣ್ಯ ಇಲಾಖೆಯ ಸಹಕಾರದಿಂದ ಸೆಮಿನಾರ್‌ಗಳನ್ನು ಮಾಡಲು ಸಭೆಯಲ್ಲಿ ತಿಳಿಸಿದರು.

5) ಚಿಟ್ಟೆಗಳ ಅಧ್ಯಯನ App ಬಳಕೆಯ ಶಾಲಾ ಹಂತದ ಮೇಲ್ವಿಚಾರಣೆ:-

ಶ್ರೀಮತಿ ರಾಜೇಶ್ವರಿ ಆರ್.ಪಿ. ರವರು ಮಾತನಾಡಿ ಇಕೋ-ಕ್ಲಬ್ ವತಿಯಿಂದ ಈ ಬಾರಿ ಚಿಟ್ಟೆಗಳ ಅಧ್ಯಯನ ಮಾಡಿ ಫೋಟೋ ತೆಗೆದು App ನಲ್ಲಿ ಫೋಟೋ ಅಪ್ ಲೋಡ್ ಮಾಡುವ ಬಗ್ಗೆ ತಿಳಿಸಿರುವುದರ ಬಗ್ಗೆ ಚರ್ಚಿಸಿದರು. ಅದಕ್ಕೆ ಪ್ರತಿಯಾಗಿ ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ಮಕ್ಕಳಿಗೆ ಈ App ಬಗ್ಗೆ ಸೂಕ್ತ ತಿಳುವಳಿಕೆ ನೀಡುವಂತೆ "ಚಿಟ್ಟೆಗಳ ಅಧ್ಯಯನ App" ಯಶಸ್ವಿಯಾಗಿ ಬಳಸುವಂತೆ ತಿಳಿಸಿ, ಚಿಟ್ಟೆಗಳು ಶಾಲಾ ಆವರಣದಲ್ಲಿ ಬಾರದೇ ಹೋದರೆ ಮಕ್ಕಳು ಬೇರೆ ಕಡೆ ಹೋಗಿ ಚಿಟ್ಟೆಯ ಫೋಟೋ ತೆಗೆಯಲು ಹೋಗಿ ಅಪಾಯಕ್ಕೆ ಗುರಿಯಾಗುತ್ತಾರೆ ಇದರ ಬಗ್ಗೆ ಎಚ್ಚರಿಕೆ ವಹಿಸಿ ಶಾಲಾ ಆವರಣದಲ್ಲಿ ಚಿಟ್ಟೆ ಬಂದರೆ ಮಾತ್ರ ಫೋಟೋ ತೆಗೆದು ಅಪ್ ಲೋಡ್ ಮಾಡಲು ತಿಳಿಸಿದರು.

ಅರಣ್ಯ ಇಲಾಖೆಯ ಆರ್.ಗೋಪಿನಾಥ್ ರವರು ಮಾತನಾಡಿ ನೀರಿನ ಸಂಕರಕ್ಷಣೆಯ ಬಗ್ಗೆ ಒಂದು ದಿನದ ಸೆಮಿನಾರ್ ಮಾಡಿ ನಮಗೆ ತಿಳಿಸಿದರೆ ನಾವು ಬಂದು ಭಾಗವಹಿಸಿ ಮಾಹಿತಿಯನ್ನು ನೀಡುತ್ತೇವೆಂದು ತಿಳಿಸಿದರು ಹಾಗೂ ಜೀವ ವೈವಿಧ್ಯತೆಯ ಅಧ್ಯಯನಗಳ ಬಗ್ಗೆ ಮಾಹಿತಿಯನ್ನು ತಿಳಿಸಿದರು.

ಪರಿಸರ ಜಾಗೃತಿಗಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮ, ಚುಟುಕು ಭಾಷಣ ಸ್ಪರ್ಧೆ, ಸೆಮಿನಾರ್, ಅತಿಥಿ ಉಪನ್ಯಾಸ, ಆಶುಭಾಷಣ ಸ್ಪರ್ಧೆಗಳ ಮೂಲಕ; ಔಷಧಿಯ ಸಸ್ಯಗಳು ಮತ್ತು ಅವುಗಳ ಉಪಯೋಗ, ಆರೋಗ್ಯ ಮತ್ತು ಸ್ವಚ್ಛತೆ, ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ವಿವರಣೆ, ಪರಿಸರ ಮಾಲಿನ್ಯದಿಂದಾಗುವ ಅನಾನುಕೂಲಗಳು, ಭೂತಾಪಮಾನ ಮತ್ತು ಪರಿಸರದಲ್ಲಿ ಬದಲಾವಣೆ, ಪರಿಸರದಿಂದ ಉಂಟಾಗುವ ಅವಘಡಗಳು, ವಿಷಕಾರಿ ತ್ಯಾಜ್ಯ ವಸ್ತುಗಳ ಬಗ್ಗೆ ಅರಿವುಮೂಡಿಸುವುದು, ಅಂತರ್ಜಲ ಸಂರಕ್ಷಣೆ,ಮಾಲಿನ್ಯ ನಿಯಂತ್ರಣ, ಶಬ್ಧಮಾಲಿನ್ಯ, ಭೂಸವೆತ, ಅನುಪಯುಕ್ತ ವಸ್ತುಗಳ ನಿರ್ವಹಣೆ, ಪೇಪರ್ ಮತ್ತು ಪ್ಲಾಸ್ಟಿಕ್ ಮರುಬಳಕೆ, ಮಳೆ ನೀರು ಕೊಯ್ಲು ಸಾವಯವ ಕೃಷಿ, ಎರೆ ಹುಳಗಳಿಂದ ಗೊಬ್ಬರ ತಯಾರಿಕೆ, ಜೀವವೈವಿದ್ಯತೆ ಬಗ್ಗೆ ಅರಿವು ಮೂಡಿಸುವುದು, ಶಾಲಾ ಕಾಲೇಜುಗಳಲ್ಲಿ ಸಸಿಗಳನ್ನು ನೆಡುವುದು,ಸಾರ್ವಜನಿಕ ಸ್ಥಳ, ಮನೆಯ ಅಕ್ಕಪಕ್ಕ ಹಾಗೂ ಶಾಲಾ ಕಾಲೇಜುಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವುದರ ಬಗ್ಗೆ ತಿಳಿಸುವುದು.

Scanned by CamScanner

**6) ಪರಿಸರದ ಮಹತ್ವ :-**

ಪರಿಸರದ ಮಹತ್ವ ತಿಳಿಯಲು, ಅರಣ್ಯ ಪ್ರದೇಶ ಹಾಗೂ ಬೆಟ್ಟಗುಡ್ಡ ಪ್ರದೇಶದಲ್ಲಿ ಚಾರಣ ನಡೆಸುವುದು. ಪರಿಸರ ಸಂರಕ್ಷಣೆಗಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ಸಂಘಟಿಸುವುದಕ್ಕಾಗಿ ಪರಿಸರ ಜಾಗೃತಿ ಅಭಿಯಾನಗಳು, ಮಾಲಿನ್ಯದಿಂದ ಕೂಡಿದ ಪ್ರದೇಶಗಳಲ್ಲಿ ಉಂಟಾಗುವ ಅನಾರೋಗ್ಯಗಳನ್ನು ಪರಿಚಯಿಸುವುದು. ಪ್ರಾಣಿ ಸಂಗ್ರಹಾಲಯ, ಅಭಯಾರಣ್ಯಗಳಿಗೆ ಭೇಟಿ, ಪ್ರಾಣಿ-ಪಕ್ಷಿಗಳ ಬಗ್ಗೆ ಅರಿವು ಮೂಡಿಸುವುದು, ಪರಿಸರ ಜಾಗೃತಿಗಾಗಿ ರ್‍ಯಾಲಿ, ಜಾಥಾ, ಮಾನವ ಸರಪಳಿ, ಭಾಷಣ, ಚರ್ಚೆ, ಸಾರ್ವಜನಿಕ ಸಭೆ, ಸಾರ್ವಜನಿಕ ಅಭಿಪ್ರಾಯ ಸಂಗ್ರಹವನ್ನು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ರೈತ ಸಂತೆ ಮತ್ತು ಜನನಿಬಿಡ ಪ್ರದೇಶಗಳಲ್ಲಿ ನಡೆಸುವುದು. ವಿದ್ಯಾರ್ಥಿಗಳ ಮೂಲಕ ಸಮುದಾಯದಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

**7) ಆಯ್ಕೆಯಾದ ಶಾಲಾ ಮುಖ್ಯಸ್ಥರಿಗೆ ಅರಿವು ಮೂಡಿಸುವುದು:-**

ಇಕೋ-ಕ್ಲಬ್ ಚಟುವಟಿಕೆಯ ಆಯ್ಕೆಯಾದ ಶಾಲಾ ಮುಖ್ಯಶಿಕ್ಷಕರಿಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಭೆ ನಡೆಸುವುದು, ಹಾಗೂ ನೋಡಲ್ ಶಿಕ್ಷಕರಿಗೆ ಜಿಲ್ಲಾಮಟ್ಟದಲ್ಲಿ ತರಬೇತಿ ನಡೆಸುವ ಕುರಿತು ಸಭೆಯ ಗಮನಕ್ಕೆ ತರಲಾಯಿತು. ಎಂಪ್ರಿ ಸಂಸ್ಥೆಯವರು ಪ್ರಸಕ್ತ ಸಾಲಿನಿಂದ ಜಿಲ್ಲಾ ನೋಡಲ್ ಅಧಿಕಾರಿಯಾಗಿ ಶ್ರೀ ಮಹೇಶ್ ರವರನ್ನು ನೇಮಿಸಿದ್ದು, ಅವರು ಎಲ್ಲಾ ಶಾಲೆಗಳಿಗೆ ಭೇಟಿ ನೀಡಿ ಶಾಲೆಗಳ ಇಕೋ-ಕ್ಲಬ್ ಚಟುವಟಿಕೆಗಳನ್ನು ನಡೆಸಿರುವ ಬಗ್ಗೆ ಹಾಗೂ ವರದಿಗಳನ್ನು ಕ್ರೂಢೀಕರಿಸುವ ಹಾಗೂ ವಾರ್ಷಿಕ ವರದಿಗಳನ್ನು ಬೈಂಡಿಂಗ್ ಮಾಡಿಸುವ ಮುಂತಾದ ಕೆಲಸ ಕಾರ್ಯಗಳನ್ನು ನಿರ್ವಹಿಸುವರು.

**8)ಜಿಲ್ಲಾ ಅನುಷ್ಠಾನ ಮತ್ತು ಮೇಲ್ವಿಚಾರಣಾ ಸಮಿತಿಯ ಜವಾಬ್ದಾರಿಗಳು:-**

ಜಿಲ್ಲೆಯಲ್ಲಿ ಆಯ್ಕೆಯಾದ ಶಾಲೆಗಳ ಇಕೋ-ಕ್ಲಬ್ ಚಟುವಟಿಕೆಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು ಮತ್ತು ರಾಜ್ಯ ನೋಡಲ್ ಏಜೆನ್ಸಿಯಾದ ಎಂಪ್ರಿ ಸಂಸ್ಥೆಯವರು ನಿಗದಿಪಡಿಸಿರುವ ನಮೂನೆಯಲ್ಲಿ ಶಾಲೆಗಳಿಂದ ಮಾಹಿತಿ ಪಡೆದು ನಿರ್ವಹಣೆ ಮಾಡುವುದು. ಇಕೋ-ಕ್ಲಬ್ ಚಟುವಟಿಕೆಯ ಸಂಬಂಧ ಇತರೆ ವಿಚಾರಗಳನ್ನು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಯಿತು.

ಮಾನ್ಯ ಜಿಲ್ಲಾಧಿಕಾರಿಗಳು, 2019-20ನೇ ಸಾಲಿನ ಕ್ರಿಯಾ ಯೋಜನೆಯಂತೆ, ಕಾರ್ಯಕ್ರಮ ಕೈಗೊಳ್ಳಲು ಸೂಚಿಸಿದರು. ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಉಪನಿರ್ದೇಶಕರು ಹಾಗೂ ಸದಸ್ಯ
ಕಾರ್ಯದರ್ಶಿಗಳು, ಜಿಲ್ಲಾ ಅನುಷ್ಠಾನ
ಮತ್ತು ಮೇಲ್ವಿಚಾರಣಾ ಸಮಿತಿ.

ಜಿಲ್ಲಾಧಿಕಾರಿಗಳು, ಹಾಗೂ
ಅಧ್ಯಕ್ಷರು ಜಿಲ್ಲಾ ಅನುಷ್ಠಾನ
ಮತ್ತು ಮೇಲ್ವಿಚಾರಣಾ ಸಮಿತಿ.

Scanned by CamScanner